ಶ್ರೀ ಎಂ. ವಿ. ಕೃಷ್ಣಪ್ಪ.—ಮೂರು ಕೇಸುಗಳಲ್ಲಿ ಇತ್ಯರ್ಥವಾಗಿ, ಅವಾರ್ಡ್ ಆಗಿ ಭೂಮಿಯನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿಕೊಳ್ಳಲು ಪಾರ್ಟಿಗಳಿಗೆ ಕೊಟ್ಟಿದೆ. ಇನ್ನು ಆರು ಕೇಸುಗಳು ಇತ್ಯರ್ಥವಾಗಬೇಕಾಗಿವೆ. ಬೇಗ ಇದನ್ನೂ ಇತ್ಯರ್ಥ ಮಾಡಬೇಕೆಂದು ತಾಲ್ಲೂಕು ಬೋರ್ಡ್ ಚೇರ್ಮನ್ನರಿಗೆ ಬರೆದಿದ್ದೇವೆ.

Starting of a Government Mulberry Farm in Dharmapura Hobli.

*Q.—308. Sri V. MASIYAPPA (Hiriyur).—

Will the Government be pleased to state :—

(*a*) whether the people of Dharmapura Hobli in Hiriyur Taluk have been requesting Government to start a Government Mulberry Farm in that Hobli to help the enthusiastic ryots in growing mulberry and take up silkworm rearing ;

(*b*) if so, the action taken by them on their request ;

(*c*) whether it has come to their notice that a considerable number of ryots have already started growing mulberry and are rearing silkworm in the said Hobli ?

A.—Sri R. DAYANANDA SAGAR (Deputy Minister for Sericulture).—

(*a*) The panchayat of Dharmapura made a request to Government for sanctioning for a silk-centre to Dharmapura.

(*b*) Investigation has been conducted by the Assistant Director of Sericulture and necessary assistance is being given for planting mulberry. It is too early to start a Government farm as the area under mulberry is only 9-10 acres.

(*c*) A few persons have started growing mulberry.

ಶ್ರೀ ವಿ. ಮಸಿಯಪ್ಪ.—ಧರ್ಮಾಪುರ ಗ್ರಾಮ ಪಂಚಾಯಿತಿಯಿಂದ ಮಾತ್ರ ಮನವಿ ಬಂದಿದೆ ಎಂದು ಅಪ್ಪಣೆ ಕೊಡಿಸಿದ್ದಾರೆ. ಮಾನ್ಯ ಸರ್ಕಾರದ ಅನೇಕ ಮಂತ್ರಿಗಳು, ಮುಖ್ಯ ಮಂತ್ರಿಗಳು, ವ್ಯವಸಾಯ ಮಂತ್ರಿಗಳು ಮತ್ತು ರೇಷ್ಮೆ ಶಾಖೆಯ ಉಪಮಂತ್ರಿಗಳೂ ಆ ಹೋಬಳಿಯಲ್ಲಿ ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ಅನೇಕ ಗ್ರಾಮಗಳ ರೈತರು ನಮಗೆ ರೇಷ್ಮೆ ವ್ಯವಸಾಯಕ್ಕೆ ಸರಿಯಾದ ಏರ್ಪಾಡು ಮಾಡಿಕೊಡಬೇಕು, ಒಂದು ಡೆಮಾನ್‌ಸ್ಟ್ರೇಷನ್ ಫಾರಂ ತೆರೆಯಬೇಕು ಎಂದು ಕೇಳಿದ್ದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಆರ್. ದಯಾನಂದ ಸಾಗರ್.—ರೈತರು ಕೇಳಿದ್ದಾರೆ. ಆದರೆ ಅಲ್ಲಿ ರೇಷ್ಮೆ ಸಾಗುವಳಿ ಮಾಡುತ್ತ ಇರತಕ್ಕ ರೈತರು ಬಹಳ ಕಡಮೆ ಇದ್ದಾರೆ. ಕೇವಲ 9-10 ಜನ ಮಾತ್ರ ಇದ್ದಾರೆ. ಹೆಚ್ಚು ಮಂದಿ ಆ ಕೈಗಾರಿಕೆಯನ್ನು ತೆಗೆದುಕೊಂಡರೆ ಸರ್ಕಾರದಿಂದ ಸಹಾಯವನ್ನು ಕೊಡುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಗಾಂಜಿ ವೀರಪ್ಪ.—ಅಲ್ಲಿ ಮಲ್ಬರಿ ಬೆಳೆಯುವುದಕ್ಕೆ ಬಹಳ ಅನುಕೂಲವಿದೆ, ಭೂಮಿ ಚೆನ್ನಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಆರ್. ದಯಾನಂದ ಸಾಗರ್.—ಅಲ್ಲಿ ರೆಡ್ ಗ್ರಾವೆಲ್ ಸಾಯಿಲ್ ಇದೆ. ಅದರಲ್ಲಿ ಮಲ್ಬರಿ ಬೆಳೆಯುವುದಕ್ಕೆ ಅನುಕೂಲವಾಗಿದೆ. ಆ ಬಗ್ಗೆ ಅರ್ಜಿ ಬಂದಿವೆ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅಲ್ಲಿ ಒಂದು ಫಾರಂ ಮಾಡದೆ ಇದ್ದರೂ ಕೂಡ ರೈತರು ರೇಷ್ಮೆ ವ್ಯವಸಾಯ ಮಾಡುವುದಕ್ಕೆ ಉತ್ತಮವಾದ ಬೀಜ ವಗೈರೆ ಏನೇನು ಬೇಕೋ ಅದನ್ನೆಲ್ಲ ಕೊಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಆರ್. ದಯಾನಂದ ಸಾಗರ್.— ಈಗಾಗಲೇ ಅಲ್ಲಿಗೆ ಒಬ್ಬ ಅಧಿಕಾರಿಯನ್ನು ನೇಮಿಸಿ ಏನೇನು ಸೌಕರ್ಯಗಳನ್ನು ಕೊಡಬೇಕೋ ಅದನ್ನೆಲ್ಲ ಕೊಡುತ್ತಿದ್ದೇವೆ.

Sri GANJI VEERAPPA.—May I know whether there is any difficulty for Government to have a farm there ?

Sri R. DAYANANDA SAGAR.—For starting a farm there should be sufficient number of ryots engaged in the industry and also the number of acres under mulberry should be sufficient, so as to justify the existence of the farm. That we will think over when sufficient number of people take up to sericulture.

ಶ್ರೀ ಎ. ಮಸಿಯಪ್ಪ.—ರೇಷ್ಮೆ ವ್ಯವಸಾಯದಲ್ಲಿ ಹುಳು ಮತ್ತು ಗೂಡನ್ನು ಸಾಕತಕ್ಕದ್ದು ಬಹಳ ಸೂಕ್ಷ್ಮವಾಗಿರತಕ್ಕ ಕೆಲಸವಾಗಿರುವುದರಿಂದ ಅನುಭವವಿಲ್ಲದೆ ಇರತಕ್ಕ ರೈತರು ಪ್ರಾರಂಭ ದಲ್ಲಿ ಅನೇಕ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ಕೂಡಲೇ ಸೊಪ್ಪನ್ನು ಮಾತ್ರ ಬೆಳೆದು ಸರ್ಕಾರಕ್ಕೆ ಕೊಟ್ಟು ಅವರು ಲಾಭವನ್ನು ಪಡೆಯತಕ್ಕ ದೃಷ್ಟಿಯಿಂದ ಅವರಿಗೆ ಉತ್ತೇಜನ ಕೊಡುವುದಕ್ಕೋಸ್ಕರ ಚಾಕಿ ಸೆಂಟರ್ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ, ಸ್ವಾಮಿ ?

ಶ್ರೀ ಆರ್. ದಯಾನಂದ ಸಾಗರ್.—ಈಗಾಗಲೇ ಒಬ್ಬ ಅಧಿಕಾರಿಯನ್ನು ನೇಮಿಸಿದ್ದೇವೆ. ಆತ ರೈತರಿಗೆ ಏನೇನು ಸೌಕರ್ಯಗಳನ್ನು ನೀಡಬೇಕು, ಸಲಹೆಗಳನ್ನು ಕೊಡಬೇಕು, ಅವೆಲ್ಲವನ್ನೂ ಕೊಡುತ್ತಾರೆ. ಚಾಕಿ ರೇರಿಂಗ್ ಸೆಂಟರ್ ಕೊಡಬೇಕಾದರೆ ಅದಕ್ಕೆ 20 ರಿಂದ 50 ಜನ ರೈತರಾದರೂ ಈ ವ್ಯವಸಾಯವನ್ನು ತೆಗೆದುಕೊಂಡರೆ ಸಾಧ್ಯ ಎಂದು ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆಯನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಬೈರಪ್ಪಾಜಿ.—ಸರ್ಕಾರ ಈ ಕೈಗಾರಿಕೆಯನ್ನು ಪ್ರಾರಂಭ ಮಾಡಲು ಯಾವ ಯಾವ ಕಂಡೀಷನ್‌ಗಳನ್ನು ಪೂರೈಸಬೇಕು, ಸ್ವಾಮಿ ?

ಶ್ರೀ ಆರ್. ದಯಾನಂದ ಸಾಗರ್.—ಈಗಾಗಲೇ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದೇವೆ. ಅವರು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ. ಎಷ್ಟು ಎಕರೆಯಲ್ಲಿ ಈ ವ್ಯವಸಾಯವನ್ನು ಮಾಡ ಬಹುದು, ಎಷ್ಟು ಜನ ಇದನ್ನು ತೆಗೆದುಕೊಳ್ಳಬಹುದು ಎಂಬ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡು ತ್ತಿದ್ದಾರೆ. ಇದು ಒಂದು ತಾಂತ್ರಿಕ ಕೆಲಸವಾಗಿ ಇರುವುದರಿಂದ ತಕ್ಷಣ ಇದನ್ನು ತೆಗೆದುಕೊಳ್ಳುವುದ ಕ್ಕಾಗುವುದಿಲ್ಲ. ಅವರಿಗೆ ತರಬೇತಿ ಕೊಡುವ ವ್ಯವಸ್ಥೆಯೂ ಆಗಬೇಕು. ಇದನ್ನೆಲ್ಲ ಈಗ ಮಾಡು ತ್ತಿದ್ದೇವೆ.

Disposal of Gomal Lands in Gauribidanur Taluk,

*Q.—314. Sri R. N. LAKSHMIPATHI (Gauribidanur).—

Will the Government be pleased to state :—

(*a*) the number of villages in Gauribidanur Taluk which have got gomal lands in excess ;

(*b*) the number of villages in which the gomal lands are unauthorisedly cultivated in the said taluk ;

(*c*) what is the policy of Government in disposing of gomal lands for cultivation ?

A.—Sri M. V. KRISHNAPPA (Minister for Revenue).—

(*a*) 35.

(*b*) 115.

(*c*) Excess gomal lands are being disposed of for cultivation under Land Grant Rules now in force